## ಸಾಮಾನ್ಯ ಸಭೆಗೆ ಸಂಬಂಧಿಸಿದಂತೆ ವಿಶೇಷ ಮಾಹಿತಿ :

- ಸಭೆಯ ನೋಟಿಸನ್ನು ಎಲ್ಲಾ ಅರ್ಹ ಸಹಕಾರಿಗಳಿಗೆ ಕಳುಹಿಸಲಾಗಿದೆ. ಸಭೆಗೆ ಬರುವಾಗ ಸಭೆಯ ನೋಟೀಸನ್ನು ತಪ್ಪದೇ ತರುವುದು.
- ಎಲ್ಲಾ ಸೌಹಾರ್ದ ಸಹಕಾರಿಗಳೂ ಕೂಡ ಸಂಯುಕ್ತ ಸಹಕಾರಿಯ ಸದಸ್ಯರು. ಪ್ರತಿವರ್ಷ ನಡೆಯುವ ಸಾಮಾನ್ಯ ಸಭೆಯಲ್ಲಿ ನಡೆಯುವ ಚರ್ಚೆ, ತೆಗೆದುಕೊಳ್ಳುವ ನಿರ್ಣಯಗಳು ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಅನ್ವಯವಾಗುತ್ತವೆ. ಈ ಮಹತ್ವದ ಸಭೆಯಲ್ಲಿ ಭಾಗವಹಿಸುವ ಮೊದಲು, ಎಲ್ಲಾ ಅರ್ಹ ಸಹಕಾರಿಗಳ ಡೆಲಿಗೇಟುಗಳು ಸಭೆಯ ಅಜೆಂಡಾ ಮತ್ತು ಟಿಪ್ಪಣಿಗಳನ್ನು ಅಧ್ಯಯನ ಮಾಡಿಕೊಂಡು ಬರುವ ಮೂಲಕ ಸಭೆಯನ್ನು ಯಶಸ್ವಿಗೊಳಿಸಲು ಕೋರಿದೆ.
- ಸಭೆಯಲ್ಲಿ ಭಾಗವಹಿಸಲು ಗುರುತಿನ ಚೀಟಿ ಕಡ್ಡಾಯ. ಅಧಿಕೃತ ಡೆಲಿಗೇಟುಗಳನ್ನು ಹೊರತುಪಡಿಸಿ, ಯಾವುದೇ ವೀಕ್ಷಕರಿಗೂ ಹಾಗೂ ಡೆಲಿಗೇಟುಗಳೊಂದಿಗೆ ಬರುವ ಯಾವುದೇ ಸದಸ್ಯರಿಗೂ ಸಭೆಯ ಕಾರ್ಯ–ಕಲಾಪಗಳಲ್ಲಿ ಪಾಲ್ಗೊಳ್ಳಲು ಅವಕಾಶ ಇರುವುದಿಲ್ಲ. ಸಾಮಾನ್ಯ ಸಭೆಯ ಅಧಿಕೃತ ಕಾರ್ಯ–ಕಲಾಪ ಮುಕ್ತಾಯವಾದ ನಂತರ ವೀಕ್ಷಕರಿಗೆ ಹಾಗೂ ಇತರೆ ಸಹಕಾರಿಗಳಿಗೆ ಸಲಹೆ/ಅಭಿಪ್ರಾಯ ವ್ಯಕ್ತಪಡಿಸಲು ಮುಕ್ತ ಅವಕಾಶ ಇರುತ್ತದೆ.
- ಸಭೆಯಲ್ಲಿ ಪ್ರಶ್ನೆ ಕೇಳಬಯಸುವ ಸದಸ್ಯರು ದಿನಾಂಕ 15.09.2019ರೊಳಗೆ ಲಿಖಿತವಾಗಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಿಗೆ ನೀಡಬೇಕು. (ದಯವಿಟ್ಟು ಸಾಮಾನ್ಯ ಸಭೆ ನಡೆಸುವ ನಿಯಮಾವಳಿಗಳನ್ನು ನೋಡಿ.
- ಬೆಳಿಗ್ಗೆ ಉಪಾಹಾರ (ಬೆಳಿಗ್ಗೆ 8.30 ಗಂಟೆಯಿಂದ 10. ಗಂಟೆಯವರೆಗೆ), ಮಧ್ಯಾಹ್ನದ ಭೋಜನ ಮತ್ತು ಸಾಯಂಕಾಲ ಚಹಾ/ಕಾಫಿ ವ್ಯವಸ್ಥೆ ಇರುತ್ತದೆ.
- ನೋಟೀಸಿನ ಪುಸ್ತಕದ ಕೊನೆಯಲ್ಲಿ ಸಭೆ ನಡೆಸುವ ರೀತಿ, ನೀತಿ ಮತ್ತು ನಡವಳಿಗಳನ್ನು ಮುದ್ರಿಸಲಾಗಿದೆ. ಅದನ್ನು ಗಮನಿಸಿ ಮತ್ತು ಪಾಲಿಸುವ ಮೂಲಕ, ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಯನ್ನು ಸುಗಮವಾಗಿ, ವ್ಯವಸ್ಥಿತವಾಗಿ, ಹೆಚ್ಚು ಅರ್ಥಪೂರ್ಣವಾಗಿ ಮತ್ತು ಯಶಸ್ವಿಯಾಗಿ ನಡೆಸಲು ಸಹಕರಿಸಿ.
- ಮತ್ತೊಮ್ಮೆ ತಮಗೆ ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಗೆ ಆತ್ಮೀಯವಾದ ಸ್ವಾಗತವನ್ನು ಕೋರುತ್ತಾ, ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಕೋರಿದೆ.

### ಗುರುತಿನ ಚೀಟಿ :

- ಇದುವರೆಗೆ ಗುರುತಿನ ಚೀಟಿ ಪಡೆಯದವರು ಈ ನೋಟೀಸಿನಲ್ಲಿ ನೀಡಲಾದ ಗುರುತಿನ ಚೀಟಿಯ ಮಾದರಿಯನ್ನು ಭರ್ತಿ ಮಾಡಿ 14.09.2019 ರೊಳಗೆ ಸಂಯುಕ್ತ ಸಹಕಾರಿಯ ಕಛೇರಿಗೆ ತಲುಪಿಸತಕ್ಕದ್ದು. ಅವರಿಗೆ ಸಾಮಾನ್ಯ ಸಭೆಯ ದಿನದಂದು ಗುರುತಿನ ಚೀಟಿಯನ್ನು ನೀಡಲಾಗುವುದು

## ಸಾಮಾನ್ಯ ಸಭೆಯ ದಿನದ ಕಾರ್ಯಕ್ರಮಗಳು

- ಅನಿಯಂತ್ರಿತ ಠೇವಣಿ ನಿಷೇಧ ಕಾಯ್ದೆ : ವಾರ್ಷಿಕ ಸಾಮಾನ್ಯ ಸಭೆ ಮುಕ್ತಾಯವಾದ ನಂತರ ಕೇಂದ್ರ ಸರ್ಕಾರ ಹೊಸದಾಗಿ ಜಾರಿಗೆ ತಂದಿರುವ ಅನಿಯಂತ್ರಿತ ಠೇವಣಿ ನಿಷೇಧ ಕಾಯ್ದೆ ಕುರಿತು ಕಾರ್ಯಗಾರ/ಸಂವಾದ.
- ತಂತ್ರಜ್ಞಾನ ಮೇಳ & ಪ್ರದರ್ಶಿನಿ ವ್ಯವಸ್ಥೆ : ಸಭಾಂಗಣದ ಆವರಣದಲ್ಲಿ ತಂತ್ರಾಂಶ (software) ಪೂರೈಕೆದಾರರು, ವಿಮಾ ಉತ್ಪನ್ನ ಅಥವಾ ಬಡ್ಡಿಯೇತರ ಆದಾಯಗಳಿಗೆ ಸಂಬಂಧಿಸಿದ ಸೇವಾ ಪೂರೈಕೆದಾರರು, ತಂತ್ರಜ್ಞಾನ (Technology) ಹಾಗೂ ಸುರಕ್ಷತಾ (security) ಉಪಕರಣಗಳ ಪೂರೈಕೆದಾರರು ತಮ್ಮ ತಮ್ಮ ಸೇವೆ/ಉಪಕರಣಗಳ ಪ್ರದರ್ಶನ/ಮಾಹಿತಿ ನೀಡಲಿದ್ದಾರೆ. ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಪ್ರದರ್ಶಿನಿ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. .
- ಆದ್ದರಿಂದ ಬೆಳಿಗ್ಗೆ 10.00 ಗಂಟೆಯಿಂದ ಸಾಯಂಕಾಲದವರೆಗೆ ಬಿಡುವು ಮಾಡಿಕೊಂಡು, ಸಾಮಾನ್ಯ ಸಭೆಯ ಜೊತೆಗೆ ಉಳಿದವುಗಳಲ್ಲೂ ಭಾಗವಹಿಸಿ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಕೋರಿದೆ.